ಚಾಲಕರಿಗೆ ತಲುಪುವುದೇ ಇಲ್ಲ. ಕೆಲವು ರೈಲುಗಳು ಸುಮ್ಮನೆ ಸಾಗಿ ಹೋಗುತ್ತವೆ, ಕೆಲವು ರೈಲು ಚಾಲಕರು ತಾವು ರಾತ್ರಿಯೆಲ್ಲ ನಿದ್ರೆಗೆಟ್ಟು ಡ್ಯೂಟಿ ಮಾಡುತ್ತಿರುವಾಗ ಇವರು ಸುಖ ನಿದ್ರೆ ಮಾಡುತ್ತಿದ್ದಾರಲ್ಲ ಎಂದು ಸಿಟ್ಟಿನಿಂದ ಎಂಬಂತೆ ಸತತ ಶಿಳ್ಳೆ ಹಾಕುತ್ತ ಸಾಗುತ್ತಾರೆ. ರೈಲು ಹಳಿ ನಾವು ಇಲ್ಲಿ ಮನೆ ಮಾಡಿ ವಾಸಿಸುವುದಕ್ಕಿಂತ, ಅಥವಾ ನಾವು ಹುಟ್ಟುವುದಕ್ಕಿಂತ, ಬಹಳ ಮೊದಲಿನಿಂದಲೇ ಇಲ್ಲಿ ಇರುವುದರಿಂದ ಆ ಕುರಿತು ರೈಲ್ವೆಯವರಿಗೆ ದೂರುವುದರಲ್ಲಿ ಅರ್ಥವೇ ಇಲ್ಲ. ದೂರಿದರೂ, 'ನೀವೇ ಬೇರೆ ಕಡೆ ಮನೆ ಮಾಡಿಕೊಂಡು ಹೋಗಿ' ಅನ್ನುವ ಉತ್ತರ ಬರಬಹುದು. ಆದ್ದರಿಂದ ಅಕ್ಕನ ವಚನದ ಆಶಯದಂತೆ ರೈಲು ಹಳಿಯ ಅಕ್ಕಪಕ್ಕ ಮನೆಯ ಮಾಡಿ ರೈಲಿನ ಶಿಳ್ಳೆ ಸಪ್ಪಳಕ್ಕೆ ಕೋಪವ ತಾಳದೆ ಸಮಾಧಾನಿಯಾಗಿರಬೇಕೆಂದು ಈಗೀಗ ತಿಳಿಯತೊಡಗಿದೆ.

ಇನ್ನು ರೈಲು ನಿಲ್ದಾಣದ ಸಮೀಪ ಮನೆ ಇರುವ ನಮ್ಮ ಒಬ್ಬಿಬ್ಬರು ಮಿತ್ರರ ಗೋಳು ಬೇರೆ ರೀತಿಯದು. ಅವರಿಗೆ ರೈಲುಗಳ ಸದ್ದಿನೊಂದಿಗೆ ಹಗಲು ರಾತ್ರಿ ಬರಹೋಗುವ ರೈಲುಗಳ ಕುರಿತು ನಿಲ್ದಾಣಗಳಲ್ಲಿ ಮೈಕ್ ಮೂಲಕ ಸತತ ಬಿತ್ತರಿಸಲಾಗುವ ಮೈಕ್ ಶಬ್ದದ ಹಾವಳಿ. ಹೀಗಾಗಿ ಅವರಿಗೆ ಯಾವ ರೈಲು ಯಾವಾಗ ಬಂತು, ಯಾವಾಗ ಹೋಯಿತು, ಯಾವ ರೈಲು ವಿಳಂಬವಾಗಿ ಚಲಿಸಿತು, ರೈಲುಗಳ ವೇಳಾಪಟ್ಟಿ ಎಲ್ಲ ನಾಲಿಗೆಯ ತುದಿಯಲ್ಲಿ. ರೈಲು ನಿಲ್ದಾಣದ ಸಮೀಪ ಮನೆ ಇರುವ ಅವರಿಗೆ ಎಲ್ಲಿಗಾದರೂ ಸಮಯಕ್ಕೆ ಸರಿಯಾಗಿ ಹೋಗಿ ಬರುವ ಪ್ರಯೋಜನ ಒಂದು ಕಡೆ ಇದ್ದರೆ, ಅಪರಾತ್ರಿಯಲ್ಲಿ ರೈಲಿಗೆ ಬಂದಿಳಿಯುವ ಸಂಬಂಧಿಕರನ್ನು, ಸ್ನೇಹಿತರನ್ನು ನಗರದ ವಿವಿಧ ಬಡಾವಣೆಗಳಲ್ಲಿರುವ ಅವರವರ ಮನೆಗಳಿಗೆ ವಾಹನದಲ್ಲಿ ತಲುಪಿಸುವ ಉಸಾಬರಿ ಕೂಡ ಆಗಾಗ ಬೀಳುವ ಬಗ್ಗೆ ಅವರು ಗೊಣಗುತ್ತಿರುತ್ತಾರೆ. ಆದರೆ ಮುಂಜಾನೆ ಸಂಜೆ ರೇಲ್ವೆ ಪ್ಲಾಟ್ ಫಾರ್ಮ್‌ಗಳು ಅವರಿಗೆ ವಾಕಿಂಗ್ ಟ್ರ್ಯಾಕ್‌ಗಳಾಗಿ ಉಪಯೋಗಕ್ಕೆ ಬರುವುದೂ ಇದೆ. ಇತ್ತೀಚೆಗೆ ಒಬ್ಬ ಪೊಲೀಸ್ ಅಧಿಕಾರಿ ಹೇಳುತ್ತಿದ್ದರು, ರಾತ್ರಿ ಹೊರರಾಜ್ಯಗಳ ಕಳ್ಳರು ರೈಲು ಹಳಿ ಸಮೀಪದ ಮನೆಗಳಲ್ಲಿ ದರೋಡೆ ಮಾಡಿ ರೈಲು ಹಳಿಗಳಗುಂಟ ನಡೆದುಕೊಂಡು ಹೋಗಿ ಮುಂದೆ ಯಾವುದೋ ನಿಲ್ದಾಣದಲ್ಲಿ ರೈಲು ಹತ್ತಿ ಹೋಗಿ ಬಿಡುತ್ತಾರೆ, ಕಳ್ಳರನ್ನು ಹಿಡಿಯುವುದೇ ಕಷ್ಟವಾಗಿದೆ ಅಂತ. 'ರೈಲು ಹಳಿಗಳ ಬಳಿ ಮನೆಯ ಮಾಡಿ ಕಳ್ಳಕಾಕರಿಗಂಜಿದೊಡೆಂತಯ್ಯಾ' ಎಂದು ಅನ್ನುವ ಕಾಲ ಬರಬಹುದು. ರೈಲು ಎಲ್ಲರನ್ನು, ಎಲ್ಲವನ್ನೂ ಒಳಗೊಳ್ಳುವ ಮಿನಿ ದೇಶವಿದ್ದಂತೆ!

ರೈಲು ಹಳಿಯ ಸಮೀಪ ನಮ್ಮ ಮನೆ ಇರುವುದರಿಂದ ಮನೆಯ ಮಹಡಿಯ ಕಿಟಕಿಯಿಂದ ಬರಹೋಗುವ ರೈಲುಗಳ ಒಂದು ಅಂದಾಜು ನನಗೂ ಆಗಿದೆ. ಬೆಳಗ್ಗೆ ಚೆನ್ನಮ್ಮ ಬಂತು, ಇಂಟರ್ ಸಿಟಿ ಹೋಯಿತು, ರಾಜಧಾನಿ ಬಂತು, ಸಂಪರ್ಕ ಕ್ರಾಂತಿ ಹೋಯಿತು, ಆಮೇಲೆ ಚಾಲುಕ್ಯ ಬಂತು, ವಂದೇ ಭಾರತ್ ಹೋಯಿತು... ಎಂದು ಹೀಗೆ ಬರಹೋಗುವ ರೈಲುಗಳ ವೇಳಾಪಟ್ಟಿ ಕೂಡ ಗೊತ್ತಾಗಿದೆ. ಅತ್ತ ದೂರದ ದಿಲ್ಲಿ, ಜೈಪುರ್, ಪುಣೆ, ಮುಂಬೈನಿಂದ, ಇತ್ತ ಬೆಂಗಳೂರು ಮೈಸೂರು, ಚೆನ್ನೈ, ಹೈದರಾಬಾದ್ ಕಡೆಗಳಿಂದ ಸಾಗಿ ಹೋಗುವ ರೈಲುಗಳ ಸರದಿ ನನಗೆ ಗೊತ್ತಾಗಿಬಿಟ್ಟಿದೆ. ಆ ರೈಲುಗಳಲ್ಲಿ ಆಗಾಗ ನಾನೂ ಕೂಡ ಮೇಲೆ ಕಾಣಿಸಿದ ಎಲ್ಲ ಸ್ಥಳಗಳಿಗೆ ಅನೇಕ ನಗರ ಪಟ್ಟಣಗಳನ್ನು ಸೀಳಿಕೊಂಡು ಹೋಗಿ ಬಂದದ್ದೂ ಇದೆ. ಹೀಗಿದ್ದೂ ನಾನು ರೈಲುಗಳ ಸದ್ದು ಕುರಿತು ದೂರುವುದು ಉಚಿತವಲ್ಲ ಎಂದು ಆಗಾಗ ಅನಿಸುವುದುಂಟು. ಇತ್ತಿತ್ತಲಾಗಿ ನಾನೂ ರೈಲಿನ ಸದ್ದಿಗೆ ಒಗ್ಗಿಕೊಳ್ಳುತ್ತಿದ್ದೇನೆಯೋ ಏನೋ!

ನಮ್ಮ ಮನೆ ರೈಲು ಹಳಿಯ ಸಮೀಪ ಅಲ್ಲದೆ ಮುಖ್ಯರಸ್ತೆಗೆ ಕೂಡ ಹೊಂದಿ ಇರುವ ಕಾರಣ ರೈಲಿನ ಶಬ್ದ ಮಾಲಿನ್ಯದ ಜೊತೆ ಮುಖ್ಯರಸ್ತೆಯಲ್ಲಿ ಎಡೆಬಿಡದೆ ಸಾಗುವ ವಾಹನಗಳ ಶಬ್ದ ಮಾಲಿನ್ಯ, ವಾಯುಮಾಲಿನ್ಯವನ್ನು ಕೂಡ ಸಹಿಸಿಕೊಂಡಿರಬೇಕಾಗಿದೆ. ಅದು ಏಕಕಾಲಕ್ಕೆ ಎರಡು ಶಿಕ್ಷೆಯನ್ನು ಅನುಭವಿಸಿದಂತೆ. ಮುಖ್ಯ ರಸ್ತೆಯಲ್ಲಿ ಮನೆ ಇರುವುದೊಂದು ಹೆಮ್ಮೆಯ ವಿಚಾರವೇನಲ್ಲ. ಅದು ನಿಜವಾಗಿಯೂ ಸಂತೆಯಲ್ಲಿ ಇದ್ದಂತೆ. ಇಲ್ಲಿ ಜನರೊಂದಿಗೆ ದನಗಳು, ವಾಹನಗಳು, ದಿನದುದ್ದಕ್ಕೂ ಸದ್ದು, ಗದ್ದಲ, ಮಾಲಿನ್ಯವನ್ನು ಉಂಟು ಮಾಡುತ್ತ ಸಾಗುತ್ತಲೇ ಇರುತ್ತವೆ.

ನಮ್ಮ ಮನೆ ಸಮೀಪದ ರೈಲ್ವೆ ಹಳಿಗಳ ಆಚೆ ಒಂದು ಕಾಲೇಜು ಮತ್ತು ಅದರ ಹಾಸ್ಟೆಲ್‌ಗಳು ಕೂಡ